## ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 5** **ಪ್ರಥಮ ಭಾಷೆ : ಕನ್ನಡ** **ಮಾಹೆ : ಮಾರ್ಚ್–2022**

**ಪದ್ಯ ಭಾಗ : ಭುವನೇಶ್ವರಿ ದೇವಿ**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಮಾರ್ಚ್ 1 ನೇ ವಾರ** | * ಕೊಟ್ಟ ಚಿತ್ರಗಳ ಬಗ್ಗೆ ಗುಂಪಿನಲ್ಲಿ ಚರ್ಚಿಸಿ ಮಾತನಾಡುವರು. | * ಶಿಕ್ಷಕರು ಪದ್ಯಕ್ಕೆ ಪೂರಕವಾದ ಕನ್ನಡ ನಾಡು ಮತ್ತು ನುಡಿಯ ಬಗ್ಗೆ ಮಕ್ಕಳಲ್ಲಿ ಪ್ರೀತಿ ಮತ್ತು ಅಭಿಮಾನವನ್ನು ಮೂಡಿಸುವಂತಹ, ನಾಡಿನ ಇತಿಹಾಸ, ಆಳಿದ ವೀರರು, ನಾಡು ಕಟ್ಟಿದ ನೇತಾರರು, ಶಿಲ್ಪಕಲೆ, ಸಂಸ್ಕೃತಿಯನ್ನು ಬಿಂಬಿಸುವ ವಿವಿಧ ಚಿತ್ರಪಟಗಳನ್ನು ಗುಂಪಿನಲ್ಲಿ ಕೊಟ್ಟು ಮಕ್ಕಳು ಚಿತ್ರಗಳ ಬಗ್ಗೆ ಚರ್ಚಿಸಿ ಮಾತನಾಡಲು ಅನುವು ಮಾಡಿಕೊಡುವುದು. | ಗುಂಪು ಚಟುವಟಿಕೆ<br><br>ಚರ್ಚೆ |
| | | * ಆಯ್ದ ಪದ್ಯಭಾಗವನ್ನು ಸ್ವರಭಾರಯುಕ್ತವಾಗಿ ಹಾಡುವರು (ಲಾವಣಿ ರಾಗ) | * ಶಿಕ್ಷಕರು ಆಯ್ದ ಪದ್ಯಭಾಗವನ್ನು ರಾಗಬದ್ಧವಾಗಿ ಹಾಡಿ ಮಕ್ಕಳಿಂದ ಹಾಡಿಸುವುದು (ಧ್ವನಿಸುರಳಿಯ ಬಳಕೆ) | ಓದುವ/ಗಾಯನ ಸ್ಪರ್ಧೆ |
| | | * ಹೊಸಪದಗಳಿಗೆ ಅರ್ಥ ಹುಡುಕಿ ಸ್ವಂತವಾಕ್ಯದಲ್ಲಿ ಬಳಸಿ ಬರೆಯುವರು. | * ವಿದ್ಯಾರ್ಥಿಗಳು ಪದ್ಯವನ್ನು ಓದುತ್ತಾ ಪದ್ಯದಲ್ಲಿನ ಹೊಸಪದಗಳನ್ನು ಗುರ್ತಿಸಿ ಶಬ್ದಕೋಶದ ಸಹಾಯದಿಂದ ಅರ್ಥ ಹುಡುಕಿ ತಿಳಿದು ಸ್ವಂತವಾಕ್ಯದಲ್ಲಿ ಬಳಸಿ ಬರೆಯುವ ಕ್ರಮವನ್ನು ಶಿಕ್ಷಕರು ಮಾದರಿಯೊಂದಿಗೆ ಮಕ್ಕಳಿಗೆ ತಿಳಿಸಿ ಕೊಡುವುದು. | ಸಹಪಾಠಿ ಮೌಲ್ಯಮಾಪನ |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ಮಾರ್ಚ್ 2 ನೇ ವಾರ** | * ಪದ್ಯದ ವಿವರ /ಘಟನೆಗಳನ್ನು ವಿವರಿಸುವರು.<br><br>*'ಧಾತು' ಕ್ರಿಯಾಪದ ರೂಪ ಪಡೆಯುವ ವ್ಯಾಕರಣ ನಿಯಮವನ್ನು ಅರ್ಥೈಸಿಕೊಳ್ಳುವರು. | * ಶಿಕ್ಷಕರು ಪದ್ಯದ ಭಾವಾರ್ಥ/ಸಾರಾಂಶವನ್ನು ವಿವಿಧ ಘಟನೆಗಳೊಂದಿಗೆ ಸಮೀಕರಿಸುತ್ತಾ ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಸರಳವಾಗಿ ವಿವರಿಸುತ್ತಾ ಚರ್ಚಿಸುವುದು.<br><br>* ಧಾತುವು ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳ ಕ್ರಿಯಾಪದ ರೂಪ ಪಡೆಯುವ ವಿಧಾನವನ್ನು 5 ನೇ ತರಗತಿ ಸಿರಿಕನ್ನಡ ಪಠ್ಯಪುಸ್ತಕದ ಪುಟ ಸಂಖ್ಯೆ 116 ರಲ್ಲಿರುವ ಪಟ್ಟಿಯನ್ನು ಮಾದರಿಯಾಗಿರಿಸಿಕೊಂಡು ವಿವಿಧ ಚಟುವಟಿಕೆಗಳ ಮೂಲಕ ಶಿಕ್ಷಕರು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಸುವುದು. | ವಿದ್ಯಾರ್ಥಿ–ಶಿಕ್ಷಕ ಚರ್ಚೆ<br><br>ಗುಂಪು ಚಟುವಟಿಕೆ<br><br>ಭಾಷಾ ಆಟಗಳು |

| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ಮಾರ್ಚ್ 3 ನೇ ವಾರ** | * ಸರಳ ಪ್ರಶ್ನೆಗಳಿಗೆ ಸ್ವತಂತ್ರವಾಗಿ ಉತ್ತರ ಬರೆಯುವ/ಹೇಳುವ ಸಾಮರ್ಥ್ಯ ಹೊಂದುವರು.<br><br>* ಯೋಜನೆಯನ್ನು ಅಚ್ಚುಕಟ್ಟಾಗಿ ಮಾಡುವರು. | * ಶಿಕ್ಷಕರು ಇಡೀ ಪದ್ಯದ ಸಾರಾಂಶಕ್ಕೆ ಸಂಬಂಧಿಸಿದಂತೆ ಸರಳ ಉತ್ತರ ಬಯಸುವ ಪ್ರಶ್ನೆಗಳನ್ನು ಸಿದ್ಧಪಡಿಸಿ ಪ್ರಶ್ನೋತ್ತರ / ಅಭ್ಯಾಸಹಾಳೆಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಮಕ್ಕಳು ತಮ್ಮದೇ ಶೈಲಿ/ಧಾಟಿಯಲ್ಲಿ ಉತ್ತರಿಸಲು ಅನುಕೂಲಿಸುವುದು.<br><br>* ಕನ್ನಡ ನಾಡು–ನುಡಿಯನ್ನು ವರ್ಣಿಸುವ ಕನ್ನಡದ 4 ಗೀತೆಗಳನ್ನು ಸಂಗ್ರಹಿಸಿ ಅಂದವಾಗಿ ಬರೆದು ಓದುವ/ಹಾಡುವ ಚಟುವಟಿಕೆಯನ್ನು ವಿದ್ಯಾರ್ಥಿಗಳಿಂದ ಮಾಡಿಸುವುದು. | ಪ್ರಶ್ನೋತ್ತರ/ಅಭ್ಯಾಸ ಹಾಳೆ<br><br>ಪ್ರದರ್ಶನ |

**ಸೂಚನೆ :**

ಪರೀಕ್ಷಾ ದಿನಗಳವರೆಗೆ ಮಕ್ಕಳ ಕಲಿಕಾ ಅಂತರವು ಸರಿದೂಗುವಂತೆ ಹಾಗೂ ಹಿಂದುಳಿದಿರಬಹುದಾದ ಕಲಿಕಾಂಶಗಳಿಗೆ ಸಂಬಂಧಿಸಿದಂತೆ ಸ್ವಂತ ಅಭ್ಯಾಸ ಹಾಳೆಗಳನ್ನು ರಚಿಸಿ ಅಥವಾ ಈಗಾಗಲೇ ಬಳಸಿರುವ ಅಭ್ಯಾಸ ಹಾಳೆಗಳ ಮೂಲಕ ಪುನರಾವರ್ತನೆ ಮಾಡುವುದು.

## ಅಭ್ಯಾಸದ ಹಾಳೆ – 1

ತರಗತಿ : 5 ಪದ್ಯ : ಭುವನೇಶ್ವರಿ ದೇವಿ ಮಾರ್ಚ್ – 2022

☞ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಪಲ್ಲವರನ್ನು ಗೆದ್ದು ಮೆರೆದವರು ಯಾರು?

2. ಯುದ್ಧದಲ್ಲಿ ಆಂಗ್ಲರನ್ನು ಎದುರಿಸಿ ಗೆದ್ದವರು ಯಾರು?

3. ಭಾರತ ಸ್ವಾತಂತ್ರ್ಯದ ಚಳುವಳಿ ಯಾರ ತತ್ವದಲ್ಲಿ ಬೆಳೆಯಿತು?

4. ವಿಶಾಲ ಮೈಸೂರಿನ ಉದಯವಾದುದು ಯಾವಾಗ?

5. ನಮ್ಮ ನಾಡಿನಲ್ಲಿ ಯಾವುದು ಗೆಲ್ಲಬೇಕು? ಯಾವುದು ಬಾಳಬೇಕು?

☞ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ :

ಹಿಂದೂ ಮುಸ್ಲಿಂ ____________________

____________________ ಜಲ ಚಿಮ್ಮತಿದೆ

ಕನ್ನಡ ____________________

____________________ ಕನ್ನಡ ನಾಡಿನಲಿ

☞ ಕೆಳಗಿನ ಪದಗಳನ್ನು ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ:

1. ಬೆರಗಾಗು : ____________________
2. ಗರಿಮೆ : ____________________
3. ವೈಭವ : ____________________
4. ಸೊಬಗು : ____________________

ಅಭ್ಯಾಸದ ಹಾಳೆ – 2

ತರಗತಿ : 5 ಪದ್ಯ : ಭುವನೇಶ್ವರಿ ದೇವಿ ಮಾರ್ಚ್ – 2022

☞ 'ಬರು' ಧಾತು ಬಳಸಿಕೊಂಡು ಕೆಳಗಿನ ಪಟ್ಟಿಯನ್ನು ಪೂರ್ಣಗೊಳಿಸಿರಿ:

| | | ವರ್ತಮಾನ ಕಾಲ | | ಭೂತಕಾಲ | | ಭವಿಷ್ಯತ್ ಕಾಲ | |
|---|---|---|---|---|---|---|---|
| | | ಏಕವಚನ | ಬಹುವಚನ | ಏಕವಚನ | ಬಹುವಚನ | ಏಕವಚನ | ಬಹುವಚನ |
| ಪ್ರಥಮ ಪುರುಷ | ಅವನು | ಬರುತ್ತಾನೆ | | | | | |
| | ಅವಳು | | | | ಬಂದರು | | |
| | ಅದು | | | | | ಬರುವುದು | |
| ಮಧ್ಯಮ ಪುರುಷ | ನೀನು | | | | | | |
| ಉತ್ತಮ ಪುರುಷ | ನಾನು | | | ಬಂದೆನು | | | |

☞ ಇವುಗಳ ಧಾತು ರೂಪ ಬರೆಯಿರಿ:

ಮಾದರಿ : ಬಂದರು – ಬರು

1. ಕುಣಿವಳು= ________________
2. ಕುಡಿಯಿತು = ________________
3. ಬರೆವಳು= ________________
4. ಬಂದನು = ________________
5. ಹೋಗುವರು = ________________

☞ ಕೊಟಗಟರಿವ ಪದಗಳನ್ನು ಸೂಚನೆಯಂತೆ ಬರೆಯಿರಿ :

1. ಮಾಡಿದಳು – ಇದರ ವರ್ತಮಾನ ರೂಪ = ________________
2. ಆಡುವರು – ಇದರ ಏಕವಚನ ರೂಪ = ________________
3. ನೋಡಿತು – ಇದರ ಮೂಲ ರೂಪ = ________________
4. ತಿಂದಿತು – ಇದರ ಭವಿಷ್ಯತ್ ಕಾಲ ರೂಪ = ________________